ಅಧ್ಯಕ್ಷರು : ರೆಸೂಲ್ಯೂಷನ್ ಡ್ರಾಫ್ಟ್ ಮಾಡಿ ಮಧ್ಯಾಹ್ನ ಅಡಾಪ್ಟ್ ಮಾಡೋಣ.

ಸಕ್ಕರೆ ಉದ್ದಿಮೆ ವ್ಯವಸ್ಥೆ ಮತ್ತು ನೀತಿ ಕುರಿತು ಉನ್ನತಾಧಿಕಾರ ಸಮಿತಿ ಕೊಟ್ಟಿರುವ ವರದಿಯ ಮೇಲೆ ರಾಜ್ಯ ಸರ್ಕಾರ ಸಲಹೆಯನ್ನು ಕೇಂದ್ರಕ್ಕೆ ಕಳುಹಿಸುವುದು.

ಶ್ರೀ ಜಿ. ಶಂಕರೇಗೌಡ (ಹೊಸಪೇಟೆ) : ಮಾನ್ಯ ಅಧ್ಯಕ್ಷರೇ, ಸಕ್ಕರೆ ಉದ್ದಿಮೆಯ ವ್ಯವಸ್ಥೆ ಮತ್ತು ನೀತಿ ಕುರಿತು ಉನ್ನತಾಧಿಕಾರ ಸಮಿತಿ ಕೊಟ್ಟಿರುವ ವರದಿಯ ಮೇಲೆ ರಾಜ್ಯ ಸರ್ಕಾರ ಸಲಹೆ ಕಳುಹಿಸುವ ಕುರಿತು. ಸಕ್ಕರೆ ಉದ್ದಿಮೆಗೆ ಸಂಬಧಿಸಿದಂತೆ ಸಕ್ಕರೆ ಬೆಲೆ ನಿಯಂತ್ರಣ, ಕೈಗಾರಿಕೆಯಲ್ಲಿ ತಂತ್ರಜ್ಞಾನ ಸುಧಾರಣೆ ಮತ್ತು ಕಬ್ಬು ಬೆಳೆಗಾರರಿಗೆ ವರಮಾನದಾಯಕ ಬೆಲೆ ದೊರೆಯುವಂತೆ ಮಾಡುವುದು ಮೊದಲಾದ ವಿಷಯಗಳ ಬಗ್ಗೆ ಅಧ್ಯಯನ ಮಾಡಿ ವರದಿ ಕೊಡಲು ಕೇಂದ್ರ ಸರ್ಕಾರದ ನಿವೃತ್ತ ಹಿರಿಯ ಅಧಿಕಾರಿ, ಶ್ರೀ ಮಹಾಜನ್‌ರವರ ಹಿರಿತನದಲ್ಲಿ ಉನ್ನತಾಧಿಕಾರ ಸಮಿತಿಯನ್ನು ನೇಮಿಸಲಾಗಿತ್ತು. ಆ ಸಮಿತಿಯವರು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಒಂದು ತಿಂಗಳಲ್ಲಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಕೇಂದ್ರ ಸರ್ಕಾರದ ಮಾನ್ಯ ಕೃಷಿ ಸಚಿವರು ಹೇಳಿರುವುದಾಗಿ ಪ್ರಕಟವಾಗಿದೆ. ಆ ವರದಿಯಲ್ಲಿ ಪ್ರಗತಿಪರ ಬದಲಾವಣೆಗಳಿಗೆ ಪೂರಕ ಸಲಹೆಗಳಿದ್ದರೂ, ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಬೆಳೆಗಾರರ ಶೋಷಣೆಯಾಗದಂತೆ ಕಾನೂನು ಮತ್ತು ವ್ಯವಸ್ಥೆಯಲ್ಲಿ ಕೆಲವು ಬದಲಾವಣೆಗಳು ಇರಬೇಕಾದುದು ಅವಶ್ಯಕವಾಗಿದೆ. ಈ ದೃಷ್ಟಿಯಿಂದ ಕಬ್ಬು ಬೆಳೆಗಾರರ ಹಾಗೂ ಕಾರ್ಖಾನೆಯ ಪ್ರತಿನಿಧಿಗಳು ಇಬ್ಬರನ್ನೂ ಸರ್ಕಾರದವರು ಕರೆದು, ಚರ್ಚಿಸಿ, ಸರ್ಕಾರದ ಮುಖಾಂತರ ಸಲಹೆ ಕಳುಹಿಸುವಂತೆ ಮಾಡಲು ಕೋರುತ್ತೇನೆ. ಕೇಂದ್ರ ಸರ್ಕಾರ ಶೀಘ್ರದಲ್ಲೇ ತೀರ್ಮಾನ ತೆಗೆದುಕೊಳ್ಳಲಿರುವುದರಿಂದ ವಿಳಂಬವಿಲ್ಲದೆ, ಕೂಡಲೇ ಕ್ರಮ ತೆಗೆದುಕೊಳ್ಳಲು ವಿನಂತಿಸುತ್ತೇನೆ.

ಶ್ರೀ ಉಮೇಶ್ ಕತ್ತಿ (ಸಕ್ಕರೆ ಸಚಿವರು) : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಮಧ್ಯಾಹ್ನದ ಒಳಗಾಗಿ ಮಾಹಿತಿಯನ್ನು ತರಿಸಿಕೊಂಡು ಉತ್ತರವನ್ನು ಒದಗಿಸಿಕೊಡುತ್ತೇವೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಕ್ರಾಂತಿಯೋಗಿ ಬಸವಣ್ಣನವರು ಹುಟ್ಟಿದ ಮನೆಯನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ಮಾಡುವುದು.

ಶ್ರೀ ಬಸವನಗೌಡ ಪಾಟೀಲ್ ಯತ್ನಾಳ್ (ಬಿಜಾಪುರ) : ಮಾನ್ಯ ಅಧ್ಯಕ್ಷರೇ, ಬಸವನ ಬಾಗೇವಾಡಿಯಲ್ಲಿರುವಂಥ ಕ್ರಾಂತಿಯೋಗಿ ಬಸವಣ್ಣ ನವರ ಮನೆಯನ್ನು ವಶಪಡಿಸಿಕೊಂಡು ಅಲ್ಲಿ ರಾಷ್ಟ್ರೀಯ ಸ್ಮಾರಕವನ್ನು ಮಾಡಬೇಕು ಎನ್ನುವ ಯೋಜನೆ, ದಿವಂಗತ ದೇವರಾಜ ಅರಸುರವರ ಕಾಲದಿಂದಲೂ ಯೋಜನೆಯಾಗಿಯೇ ಉಳಿದಿದೆ. ಆದ್ದರಿಂದ ಸರ್ಕಾರ ದಯವಿಟ್ಟು, ಸಾಮಾಜಿಕ ಕ್ರಾಂತಿಯನ್ನು ಮಾಡಿದಂಥ ವಿಶ್ವಗುರು ಬಸವಣ್ಣನವರು ಹುಟ್ಟಿದಂಥ ಮನೆಯನ್ನು ವಶಪಡಿಸಿಕೊಂಡು, ಅಲ್ಲಿ ರಾಷ್ಟ್ರೀಯ ಸ್ಮಾರಕವನ್ನು ಮಾಡಬೇಕು ಎಂದು ನಾನು ಸನ್ಮಾನ್ಯ ಮುಖ್ಯಮಂತ್ರಿಗಳನ್ನು

ಕೇಳಿಕೊಂಡಿದ್ದೆ. ಬಸವಣ್ಣನವರು ಹುಟ್ಟಿದಂಥ ಮನೆಯನ್ನು ರಾಷ್ಟ್ರೀಯ ಸ್ಮಾರಕ ಮಾಡುವುದರ ಬಗ್ಗೆ ಸರ್ಕಾರ ಏನು ಕ್ರಮಗಳನ್ನು ಕೈಗೊಂಡಿದೆ ಎಂದು ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಕನ್ನಡ ಮತ್ತು ಸಂಸ್ಕೃತ ಇಲಾಖಾ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಕ್ರಾಂತಿಯೋಗಿ ಮಹಾತ್ಮ ಬಸವೇಶ್ವರರು ಜನ್ಮ ತಾಳಿದ ಬಸವನ ಬಾಗೇವಾಡಿಯಲ್ಲಿರುವ ಮನೆಯನ್ನು ಸರ್ಕಾರ ವಶಪಡಿಸಿಕೊಳ್ಳಲು ಹಾಗೂ ಅದನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ಮಾಡುವ ಬಗ್ಗೆ. ಈಗ ಅಲ್ಲಿ ನೆಲೆಸಿರುವವರಿಗೆ ವಸತಿ, ನಿವೇಶನ ಮುಂತಾದ ಪರಿಹಾರ ನೀಡುವ ಬಗ್ಗೆ ಜಿಲ್ಲಾಧಿಕಾರಿಗಳಿಂದ ಸವಿವರವಾದ ವರದಿಯನ್ನು ಕೂಡಲೇ ಪಡೆದು ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಈಗಾಗಲೇ ಅಲ್ಲಿರತಕ್ಕಂಥ ಕೆಲವು ಸ್ಥಳಗಳನ್ನು ಸರ್ಕಾರದವರು ವಶಪಡಿಸಿಕೊಂಡಿದ್ದಾರೆ. ಅದಕ್ಕೆ ನಿಗದಿಪಡಿಸಿರತಕ್ಕಂಥ ಹಣವನ್ನು ಕೊಟ್ಟು ಜೀರ್ಣೋದ್ಧಾರ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಸಿಂಧನೂರು ಮಾರಾಟ ಸಹಕಾರ ಸಂಘವನ್ನು ಗುತ್ತಿಗೆಗೆ ತೆಗೆದುಕೊಂಡಿರುವವರಿಂದ ಆಗಿರುವ ಹಾನಿ.

ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು) : ಮಾನ್ಯ ಅಧ್ಯಕ್ಷರೇ, ಸಿಂಧನೂರಿನಲ್ಲಿರತಕ್ಕಂಥ ಒಕ್ಕಲುತನ ಒತ್ತುವಳಿ ಮಾರಾಟ ಸಹಕಾರ ಸಂಘದಲ್ಲಿ ಜಿನ್ನಿಂಗ್ ಮತ್ತು ಪ್ರೆಸಿಂಗ್ ಯೂನಿಟ್‌ಗಳನ್ನು 3 ವರ್ಷ ಗುತ್ತಿಗೆಯ ಮೇಲೆ ಕೊಡಲಾಗಿದೆ ಎನ್ನುವುದನ್ನು ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಇಲ್ಲಿ ಬಂದಿರತಕ್ಕಂಥ ವಿಚಾರವೇನೆಂದರೆ ಸಂಬಂಧಪಟ್ಟ ಗುತ್ತಿಗೆದಾರರು ಒಂದು ವರ್ಷ ನಡೆಸಿದ ನಂತರ, ಮುಂದಿನ 2 ವರ್ಷ ನಮ್ಮಿಂದ ನಡೆಸಲು ಆಗುವುದಿಲ್ಲ ಎನ್ನುವ ಮಾತನ್ನು ಲಿಖಿತ ಮೂಲಕವಾಗಿ ಸಂಬಂಧಪಟ್ಟಂಥ ಸಂಘದ ಪದಾಧಿಕಾರಿಗಳಿಗೆ ಕೊಟ್ಟಿದ್ದಾರೆ. ಅದರಿಂದಾಗಿ ಸುಮಾರು 13 ಲಕ್ಷ ರೂಪಾಯಿ ಆ ಸಂಘಕ್ಕೆ ಹಾನಿಯಾಗುತ್ತದೆ. ಇದಕ್ಕೆ ಸಂಬಂಧಪಟ್ಟವರ ಮೇಲೆ ತಾವು ಏನು ಕ್ರಮ ತೆಗೆದುಕೊಳುತ್ತೀರಿ ಮತ್ತು ಸಂಘಕ್ಕೆ ಹಣ ಹಾನಿಯಾಗದಂತೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನತಕ್ಕಂಥಾದ್ದಕ್ಕೆ ಸಚಿವರು ಉತ್ತರ ಹೇಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಸಿಂಧನೂರು ಮಾರಾಟ ಸಂಘದ ಜಿನ್ನಿಂಗ್ ಫ್ಯಾಕ್ಟರಿಯನ್ನು ಒಬ್ಬರಿಗೆ ಮೂರು ವರ್ಷದ ಕರಾರಿನ ಮೇಲೆ ಕೊಟ್ಟಿದ್ದೆವು. ಅವರು ಯಾರು ಎನುವುದನ್ನು ಈಗಾಗಲೇ ಉತ್ತರದಲ್ಲಿ ತಿಳಿಸಲಾಗಿದೆ. ಅವರು ಒಂದು ವರ್ಷದ ರೊಕ್ಕವನ್ನು ಅಡ್ವಾನ್ಸ್‌ಆಗಿ ತುಂಬಿದ್ದಾರೆ. ಪ್ರತವರ್ಷ ಅವರು ಅಡ್ವಾನ್ಸ್ ತುಂಬಬೇಕು ಎನ್ನುವ ಕರಾರು ಇತ್ತು. ಆದರೆ ಈಗ ಅವರು ತಮ್ಮಿಂದ ನೆಡೆಸಲು ಆಗುವುದಿಲ್ಲ ಎಂದು ತಿಳಿಸಿದ್ದಾರೆ. ಅದರೂ ಕೂಡ ಮೂರು ವರ್ಷದ ಕರಾರಿನ ಪ್ರಕಾರ ಅವರೇ ಅದನ್ನು ನಡೆಸಬೇಕಾಗುತ್ತದೆ. ಅವರ ಆಸ್ತಿಯನ್ನು ವಶಪಡಿಸಿಕೊಂಡು ಅವರ ಮೇಲೆ ಕ್ರಮ ತೆಗೆದುಕೊಂಡು ಸಂಘಕ್ಕೆ ರೊಕ್ಕವನ್ನು ತುಂಬಿ ಕೊಡಲು ನಾವು ವ್ಯವಸ್ಥೆ ಮಾಡುತ್ತೇವೆ.